ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ವಿರಾಜಪೇಟೆ
ಓಎಸ್ ೧೦೮/೧೩

ದಿನಾಂಕಃ ೦೩-೦೨-೨೦೧೭ ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲುಃ- ಶ್ರೀ ಸಿ.ಎಸ್.ಕೆ. ವಕೀಲರಿಂದಃ-

ನಾನು ಪದವೀಧರೆ ಆಗಿರುತ್ತೇನೆ. ನನಗೆ ವ್ಯವಹಾರ ಜ್ಞಾನ ಇರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನಾನು ಹೇಳಿದ ಮೇರೆಗೆ ನನ್ನ ವಕೀಲರು ತಯಾರು ಮಾಡಿರುತ್ತಾರೆ. ಲಾಂಚ್ ಪ್ಯಾಡ್ ಶಾಲೆಯ ಮಾಲೀಕರು ಒಂದು ಟ್ರಸ್ಟ್ ಆಗಿರುತ್ತದೆ. ನಾನು ಅದರ ಮ್ಯಾನೇಂಜಿಗ್ ಟ್ರಸ್ಟಿ ಆಗಿರುತ್ತೇನೆ.

ನನ್ನ ಗಂಡ ಹಾಗೂ ವಾದಿಯ ಹೆಂಡತಿ ಸುನೀತಳ ನಡುವೆ ೨೦೦೮ನೇ ಇಸವಿಯಲ್ಲಿ ಹಣಕಸಿನ ವ್ಯವಹಾರ ಆಗಿರುತ್ತದೆ. ಆ ವ್ಯವಹಾರದಡಿಯಲ್ಲಿ ಎಷ್ಟು ಹಣವನ್ನು ನೀಡಿರುತ್ತಾರೆ ಹಾಗೂ ಇತರ ಮಾಹಿತಿಗಳು ನನಗೆ ಗೊತ್ತಿಲ್ಲ. ಆ ವ್ಯವಹಾರದ ಲೆಕ್ಕ ಪತ್ರವನ್ನು ನಾವು ಇಟ್ಟಿದ್ದೇವೆ ಆದರ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸುನೀತರವರಿಗೆ ತಿಂಗಳಿಗೆ ಎಷ್ಟು ಹಣ ಕೊಡುತ್ತಾ ಇದ್ದೇವು ಎನ್ನುವ ಬಗ್ಗೆ ಲೆಕ್ಕ ಇಟ್ಟಿರುವುದಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಸುನೀತ ರವರಿಗೆ ಎಷ್ಟು ಹಣವನ್ನು ಹಿಂತಿರುಗಿಸಿದ್ದೇವೆ ಎಂದು ಕಾಣಿಸಿಲ್ಲ ಎಂದರೆ ಸರಿ. ಆ ರೀತಿ ಹಣ ಹಿಂತಿರುಗಿಸಿದ ವೇಳೆಯಲ್ಲಿ ಚೆಕ್ಕುಗಳನ್ನು ಹಿಂದಕ್ಕೆ ಕೊಡಲು ಕೇಳಿರುತ್ತೇವೆ ಆದರೆ ದಿನಾಂಕ ನೆನಪಿಲ್ಲ. ಯಾವ ಬ್ಯಾಂಕ್‌ನ ಚೆಕ್ಕುಗಳನ್ನು ನನ್ನ ಗಂಡ ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಹಣ ಕೊಟ್ಟರೂ ಚೆಕ್ ಹಿಂತಿರುಗಿಸದೆ ಇದ್ದದ್ದಕ್ಕೆ ವಕೀಲರ ಮೂಲಕ ನೋಟಿಸ್ ಕೊಡಿಸಿದ್ದೇವೆ ಎಂದು ನನ್ನ ಗಂಡನಿಗೆ ಗೊತ್ತಿರುತ್ತದೆ ನನಗೆ ಗೊತ್ತಿಲ್ಲ. ಬ್ಯಾಂಕ್‌ಗೆ ಚೆಕ್ಕನ್ನು ನಗದೀಕರಿಸಬಾರದೆಂದು ನಿರ್ದೇಶನವನ್ನು ಕೊಟ್ಟಿಲ್ಲ. ಆ ಬಗ್ಗೆ ಪೊಲೀಸರ ಬಳಿ ಕೂಡ ದೂರನ್ನು ನೀಡಿಲ್ಲ.

ವಾದಿಗೆ ಸಾಕಾಷ್ಟು ತೋಟಗಳು ಬಾಡಿಗೆ ಬರುವ ಕಟ್ಟಡಗಳು ಇರುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿದ್ದ ಮಟ್ಟಿಗೆ ಅವರಿಗೆ ಆಸ್ತಿ ಇಲ್ಲ ಅವರ ಹೆಂಡತಿಗೆ ಆಸ್ತಿ ಇರುತ್ತದೆ ಎನುನತ್ತಾರೆ.

ಸಿ.ಪಿ. ಚೇತನ್ ಪರಿಚಯ ಇರುತ್ತದೆ. ಅವರು ಟ್ಯಾಕ್ಸಿ ಡ್ರೈವರ್ ಆಗಿರುತ್ತಾರೆ. ಅವರು ಪೊನ್ನಂಪೇಟೆಯಲ್ಲಿ ಟ್ಯಾಕ್ಸಿ ಓಡಿಸುತ್ತಾರೆ. ನಾವು ದಿ.೨೫.೧೨.೧೦ರಂದು ಊಟಿಯಲ್ಲಿರುವ ನಮ್ಮ ಬಾಡಿಗೆ ಮನೆಯಲ್ಲಿ ಉಳಿದಿದ್ದೇವು. ೨೬.೧೨.೧೦ರಂದು ನಾವು ಬೆಂಗಳೂರಿಗೆ ಹೋಗಿರುತ್ತೇವೆ. ನಾವು  ಲೇಕ್‌ವ್ಯೂವ್ ರೆಸಾರ್ಟ್‌ನಲ್ಲಿ ತಂಗಿದ್ದೇವು. ಅಲ್ಲಿ ತಂಗಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನಾನು ನನ್ನ ಗಂಡನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಹಣ ಕೊಡುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂಃ ವಿರಾಜಪೇಟೆ.

ಸಾಕ್ಷಿದಾರರ ಸಹಿಃ